# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 760 (೨೦೨) |
| 2 | ಸದಸ್ಯರ ಹೆಸರು | ಶ್ರೀ ಎಂ.ಎ.ಗೋಪಾಲಸ್ವಾಮಿ |
| 3 | ವಿಷಯ | ದಾಖಲೆರಹಿತ ಕಂದಾಯ ಗ್ರಾಮಗಳು |
| 4 | ಉತ್ತರಿಸಬೇಕಾದ ದಿನಾಂಕ | 10/03/2021 |
| 5 | ಉತ್ತರಿಸುವ ಸಚಿವರು | ಮಾನ್ಯ ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಾಸನ ಜಿಲ್ಲೆಯಲ್ಲಿ ಗುರುತಿಸಿರುವ ದಾಖಲೆ ರಹಿತ ಕಂದಾಯ ಗ್ರಾಮಗಳೆಷ್ಟು; (ವಿವರ ನೀಡುವುದು) | ಜಿಲ್ಲೆಯಲ್ಲಿ ಒಟ್ಟು 33 ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಪ್ರಸ್ತಾವನೆಗಳಿದ್ದು, ಸದರಿ ಎಲ್ಲಾ ಗ್ರಾಮಗಳು ಪರಿಶೀಲನಾ ಹಂತದಲ್ಲಿರುತ್ತದೆ. ವಿವರ ಈ ಕೆಳಕಂಡಂತಿದೆ. |

| ಕ್ರ.ಸಂ | ತಾಲ್ಲೂಕು | ಖಾಸಗಿ | ಸರ್ಕಾರಿ | ಖಾಸಗಿ/ಸರ್ಕಾರಿ | ಬಾಕಿ |
|---|---|---|---|---|---|
| 1 | ಅರಸೀಕೆರೆ | 10 | 05 | 13 | 28 |
| 2 | ಚನ್ನರಾಯಪಟ್ಟಣ | 0 | 1 | 1 | 2 |
| 3 | ಬೇಲೂರು | 1 | 1 | 1 | 3 |
| 4 | ಆಲೂರು | 0 | 0 | 0 | 0 |
| 5 | ಹಾಸನ | 0 | 0 | 0 | 0 |
| 6 | ಹೊಳೆನರಸೀಪುರ | 0 | 0 | 0 | 0 |
| 7 | ಅರಕಲಗೂಡು | 0 | 0 | 0 | 0 |
| 8 | ಸಕಲೇಶಪುರ | 0 | 0 | 0 | 0 |
| | ಒಟ್ಟು | 11 | 07 | 15 | 33 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಜಿಲ್ಲೆಯಲ್ಲಿ ದಾಖಲೆ ರಹಿತ ಕಂದಾಯ ಗ್ರಾಮಗಳಲ್ಲಿ ವಾಸಿಸುತ್ತಿರುವ ಜನರು ಮೂಲಭೂತ ಸೌಕರ್ಯಗಳಿಲ್ಲದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; | ಹೌದು, ಕರ್ನಾಟಕ ಭೂಕಂದಾಯ ಕಾಯ್ದೆ 1964ಕ್ಕೆ ಕಲಂ 94ಡಿ ಹಾಗೂ ಕರ್ನಾಟಕ ಭೂಸುಧಾರಣಾ ಕಾಯ್ದೆ 1961ಕ್ಕೆ ಕಲಂ 38ಎ ರಡಿಯಲ್ಲಿ ತಿದ್ದುಪಡಿ ತಂದು ದಾಖಲೆರಹಿತ ಜನವಸತಿಗಳನ್ನು ಕಂದಾಯ ಗ್ರಾಮಗಳಾಗಿ ಘೋಷಿಸಲಾಗುತ್ತಿದೆ.<br>ನಂತರ ಅಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ವಾಸದ ಹಕ್ಕುದಾಖಲೆಗಳನ್ನು ನೀಡಲು ಕ್ರಮಕೈಗೊಂಡು, ಸಂಬಂಧಪಟ್ಟ ಇಲಾಖೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಸೂಚಿಸಲಾಗುತ್ತಿದೆ. |
| ಇ) | ದಾಖಲೆ ರಹಿತ ಕಂದಾಯ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಘೋಷಣೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳೇನು; (ವಿವರ ನೀಡುವುದು) | • ಕನಿಷ್ಠ ಕುಟುಂಬಗಳ ಸಂಖ್ಯೆ ಸುಮಾರು 50 ಅಥವಾ ಜನಸಂಖ್ಯೆ ಸುಮಾರು 250ನ್ನು ಹೊಂದಿರುವ ದಾಖಲೆರಹಿತ ಜನವಸತಿ ಪ್ರದೇಶಗಳು.<br>• ಗ್ರಾಮಕ್ಕಿರಬೇಕಾದ ಜಮೀನಿನ ವಿಸ್ತೀರ್ಣ ಕನಿಷ್ಠ ಸುಮಾರು 100 ಎಕರೆ ಅಥವಾ ಅದಕ್ಕೆ ಮೇಲ್ಪಟ್ಟು-(ಈ ಷರತ್ತನ್ನು ಬೆಟ್ಟಗುಡ್ಡಗಳ ತಪ್ಪಲು ಮತ್ತು ಅರಣ್ಯ ಪ್ರದೇಶಗಳಲ್ಲಿನ ಜನವಸತಿ ಪ್ರದೇಶಗಳ ಪ್ರಕರಣದಲ್ಲಿ ಸಕಾರಣದ ಸಮೇತ ಸಡಿಲಿಸಬಹುದು)<br>• ಮೂಲ ಗ್ರಾಮಠಾಣಕ್ಕೆ ಹೊಂದಿಕೊಂಡಿರಬಾರದು.(ಮೂಲ ಗ್ರಾಮಠಾಣದಿಂದ ಅಂದಾಜು 1 ಕಿ.ಮೀ ಅಂತರ ಸೂಕ್ತ) |

| | | |
|---|---|---|
| ಈ) | ಜಿಲ್ಲೆಯಲ್ಲಿನ ದಾಖಲೆ ರಹಿತ ಕಂದಾಯ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಘೋಷಣೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | • ಮಾನ್ಯ ಮುಖ್ಯಮಂತ್ರಿ ರವರು ಪ್ರಗತಿ ಪರಿಶೀಲನಾ ಸಭೆಯಲ್ಲಿ ಕಂದಾಯ ಗ್ರಾಮಗಳ ರಚನಾ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿರುತ್ತಾರೆ.<br>• ಮಾನ್ಯ ಕಂದಾಯ ಸಚಿವರ ವಿಡಿಯೋ ಸಂವಾದ ಸಭೆಯಲ್ಲಿ ಕಂದಾಯ ಗ್ರಾಮಗಳ ಕುರಿತು ಜಿಲ್ಲಾವಾರು ಪುನರಾವಲೋಕನೆ ಮಾಡಿ ಪ್ರಸ್ತಾವನೆಗಳನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.<br>• ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರು ಜಿಲ್ಲಾಧಿಕಾರಿಗಳಿಗೆ ಕಂದಾಯ ಗ್ರಾಮಗಳ ರಚನೆಯ ಕುರಿತಾಗಿ ಸಾಧಿಸಿದ ಪ್ರಗತಿಯ ಬಗ್ಗೆ ಪರಿಶೀಲಿಸಿ, ಅದರ ಮೇಲೆ ಕ್ರಮವಹಿಸಲು ಸೂಚಿಸಿರುತ್ತಾರೆ. |

**ಕಂಇ 04 ಪಿಎಲ್‌ಸಿ 2021**

(ಆರ್. ಅಶೋಕ್)
**ಕಂದಾಯ ಸಚಿವರು**